# GOVERNMENT COLLEGE FOR WOMEN
KOLAR-563101



CULTURAL REPORT

**2016-17**

## CULTURAL ACTIVITIES DURING 2018-19.

1) 04-08-2018 Inaugural function of all cultural activities was organised. All the co-ordinators and students of entire college participated and made it a grand success.



# ಕೋಲಾರದಲ್ಲಿ ಪರೀಕ್ಷಾ ಕೇಂದ್ರ

## ಬೆಂಗಳೂರು ಉತ್ತರ ವಿವಿ ಕುಲಸಚಿವ ಶಂಕರರೆಡ್ಡಿ ಮಾಹಿತಿ

ವಿಜಯವಾಣಿ ಸುದ್ದಿಜಾಲ ಕೋಲಾರ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದಿಂದ ನಗರದಲ್ಲಿ ಐಎಎಸ್, ಕೆಎಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ತೆರೆಯಲು ತೀರ್ಮಾನಿಸಲಾಗಿದೆ ಎಂದು ವಿವಿ ಕುಲಸಚಿವ ಎಂ.ಶಂಕರರೆಡ್ಡಿ ಹೇಳಿದರು.

ನಗರದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕ್ರೀಡೆ, ಎನ್‌ಸಿಸಿ, ಎನ್‌ಎಸ್‌ಎಸ್, ಸ್ಕೌಟ್ಸ್ ಗೈಡ್ಸ್, ರೆಡ್‌ಕ್ರಾಸ್, ಪರಂಪರೆ ಕೂಟ ಹಾಗೂ ಸಾಂಸ್ಕೃತಿಕ ಕಾರ್ಯ ಚಟುವಟಿಕೆಗಳ 2018-19 ನೇ ಸಾಲಿನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕೋಲಾರ ಸ್ನಾತಕೋತ್ತರ ಕೇಂದ್ರ, ಸರ್ಕಾರಿ ಬಾಲಕರ ಕಾಲೇಜಿನಲ್ಲಿ ಕೇಂದ್ರ ತೆರೆದು ತರಬೇತಿ ನೀಡಲು ಉದ್ದೇಶಿಸಲಾಗಿದೆ. ಐಎಎಸ್‌ನಲ್ಲಿ ಪ್ರಥಮ ರ‍್ಯಾಂಕ್ ಪಡೆದವರು ಸರ್ಕಾರದ ಮುಖ್ಯ ಕಾರ್ಯದರ್ಶಿ, ಹಿರಿಯ ಐಎಎಸ್ ಅಧಿಕಾರಿಗಳನ್ನು ಕರೆಸಿ ಅವರಿಂದ ಸಾರ್ವಜನಿಕ ಆಡಳಿತ ಸೇವೆ, ತರಬೇತಿ ನೀಡಲಾಗುವುದು ಎಂದರು.

ಎಂ.ಶಂಕರರೆಡ್ಡಿ

ಬೆಂಗಳೂರು ವಿವಿ ಮೂರು ಭಾಗಗಳಾಗಿ ವಿಭಜನೆಗೊಂಡ ನಂತರ ಬೆಂಗಳೂರು ಉತ್ತರ ವಿವಿ ಕೋಲಾರದಲ್ಲೇ ಕಾರ್ಯನಿರ್ವಹಿಸುತ್ತಿದೆ. ವಿವಿ ವ್ಯಾಪ್ತಿಯಲ್ಲಿ 19 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೋಲಾರದ 54, ಚಿಕ್ಕಬಳ್ಳಾಪುರ 41, ಬೆಂಗಳೂರು ಗ್ರಾಮಾಂತರ ಜಿಲ್ಲೆಯ 15 ಬೆಂಗಳೂರು ನಗರ ಜಿಲ್ಲೆಯ 102 ಸೇರಿ ಒಟ್ಟು 225 ಕಾಲೇಜುಗಳನ್ನು ಒಳಗೊಂಡಿದೆ. 2018-19ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಬೆಂಗಳೂರು ಉತ್ತರ ವಿವಿಯಿಂದಲೇ ಅಂಕಪಟ್ಟಿ ನೀಡಲಾಗುವುದು. ಈಗಾಗಲೇ ದ್ವಿತೀಯ, ತೃತೀಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಬೆಂಗಳೂರು ವಿವಿಯಿಂದಲೇ ಅಂಕಪಟ್ಟಿ ನೀಡಲಾಗುವುದು ಎಂದರು.

**ಶೀಘ್ರ ಫಲಿತಾಂಶ:** ಬೆಂಗಳೂರು ಉತ್ತರ ವಿವಿಯಲ್ಲಿ ನೂತನ ತಂತ್ರಜ್ಞಾನ ಅಳವಡಿಸಿಕೊಂಡು ಪರೀಕ್ಷೆ ನಡೆಸಿದ ನಂತರ ಶೀಘ್ರ ಫಲಿತಾಂಶ ಪ್ರಕಟಿಸಿ ಅಂಕಪಟ್ಟಿ ನೀಡಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಶಾಸಕ ಕೆ. ಶ್ರೀನಿವಾಸಗೌಡ ಕಾರ್ಯಕ್ರಮ ಉದ್ಘಾಟಿಸಿದರು. ಜಿಪಂ ಸಿಇಒ ಕೆ.ಎಸ್. ಲತಾಕುಮಾರಿ, ಕಾಲೇಜು ಪ್ರಾಂಶುಪಾಲ ಪ್ರೊ.ರಾಜೇಂದ್ರ, ರಾಜ್ಯಶಾಸ್ತ್ರ ವಿಭಾಗ ಮುಖ್ಯಸ್ಥ ಪ್ರೊ.ಅಶ್ವತ್ಥ್, ರಸಾಯನಶಾಸ್ತ್ರ ವಿಭಾಗ ಮುಖ್ಯಸ್ಥ ಪ್ರೊ. ವಿಜಯ್‌ಕುಮಾರ್, ಎಎಸ್ಪಿ ಎಂ. ರಾಜೀವ್ ಹಾಜರಿದ್ದರು.

ಕೋಲಾರದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಪರಂಪರೆ ಕೂಟ ಹಾಗೂ ಸಾಂಸ್ಕೃತಿಕ ಕಾರ್ಯ ಚಟುವಟಿಗಳ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿನಿಯರು.

04-8-2018 Inaugural function ① ①

2) 18-08-2018 auditions' were conducted at highway star many students of our college participated student by name srividya entered into semi-final.

3) 14-08-2018 samvada organisation voluntarily gave a programme to the students regarding Eco-friendly. Nearly 50 students participated.

4) 27-08-2018 lecture programme was organised by co-operative society rules regarding registration and rules regarding finance was discussed, indeed a good session.

VIJAYAVANI » BENGALURU

ನಂ. 1 ಕನ್ನಡ ದಿನಪತ್ರಿಕೆ

ವಿಜಯವಾಣಿ

ದಿನದ ಚಿತ್ರ



ವಿಜಯವಾಣಿ ಚಿತ್ರ

## ಹಾಡುಗಾರಿಕೆಯಲ್ಲಿ ಪ್ರಥಮ....

ಕೆಜಿಎಫ್‌ನ ಭಗವಾನ್ ಮಹಾವೀರ ಜೈನ್ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಅಂತರ್ ಕಾಲೇಜು ಮಟ್ಟದ ಜನಪದ ಸಂಭ್ರಮ ಕಾರ್ಯಕ್ರಮದಲ್ಲಿ ಜನಪದ ಹಾಡುಗಾರಿಕೆಯಲ್ಲಿ ಪ್ರಥಮ ಸ್ಥಾನ ಪಡೆದ ಕೋಲಾರದ ಸರ್ಕಾರಿ ಮಹಿಳಾ ಕಾಲೇಜಿನ ದ್ವಿತೀಯ ಬಿಎಸ್‌ಸಿ ವಿದ್ಯಾರ್ಥಿನಿ ಸಿ.ಎಸ್.ಶ್ರೀವಿದ್ಯಾ ವೆಲ್ಲಾಲ್‌ಗೆ ಉಪನ್ಯಾಸಕಿ ಬೃಂದಾದೇವಿ ಪ್ರಶಸ್ತಿ ಪತ್ರ ವಿತರಿಸಿದರು.

ಸುದ್ದಿ ಕಾರ್ನರ್

31-08-2018 ಜನಪದ ಗೀತೆ - Ist place II CB2 ಶ್ರೀ ವಿದ್ಯಾ.
GCWK Kolar.

5) 31-08-2018 students participated in folk song and srividya got 1st place.

6) 07-09-2018 students participation debate competition and got consolation prize.

7) 08-09-2018 students participation in folk song and dance and go 2nd Prize.



ಕೋಲಾರದ ಎಸ್‌ಡಿಸಿ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಅಂತರ ಕಾಲೇಜು ಜನಪದ ಕಲರವ ಕಾರ್ಯಕ್ರಮದಲ್ಲಿ ಕೋಲಾರ ಸರ್ಕಾರಿ ಮಹಿಳಾ ಕಾಲೇಜಿನ ದ್ವಿತೀಯ ಬಿಎಸ್ಸಿಯ ಸಿ.ಎಸ್.ಶ್ರೀವಿದ್ಯಾವೆಲ್ಲಾಲ್ ಜನಪದ ಹಾಡುಗಾರಿಕೆಯಲ್ಲಿ ತೃತೀಯ ಸ್ಥಾನ ಮತ್ತು ಕೋಲಾರ ಸರ್ಕಾರಿ ಮಹಿಳಾ ಕಾಲೇಜಿನ ಶಿರೀಷ ತಂಡದವರು ಜನಪದ ನೃತ್ಯದಲಿತೃತೀಯ ಸ್ಥಾನ ಪಡೆದರು. ಕಾಲೇಜಿನ ಪ್ರಾಂಶುಪಾಲ ಪ್ರೊ| ರಾಜೇಂದ್ರಕುಮಾರ್ ಮತ್ತು ಸಾಂಸ್ಕೃತಿಕ ಕಾರ್ಯದರ್ಶಿ ಬೃಂದಾದೇವಿ ಪ್ರಶಸ್ತಿ ಪತ್ರವನ್ನು ವಿತರಿಸಿದರು.

8) 20-09-2018 students participated in quiz at GFGC Kolar and got 3rd place.

9) 09-02-2019 lecture programme was organised on youth rights &youth commission.

10) 30-03-19 Rangoli competition was organised by youth service and Sirisha got 1st prize.

11) Sales day celebration was organised in the college students participated very enthusiastically



ಮಾರಾಟ- ಖರೀದಿ ಸಂಭ್ರಮ | ಸಾಂಪ್ರದಾಯಿಕ ಉಡುಗೆ ಮೆರುಗು

# ವಿದ್ಯಾರ್ಥಿಗಳಿಂದ ಆಹಾರ ಮಾರಾಟ ಉತ್ಸವ

ವಿಜಯವಾಣಿ ಸುದ್ದಿಜಾಲ ಕೋಲಾರ

ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುತ್ತಿದ್ದ ಕಾಲೇಜು ವಿದ್ಯಾರ್ಥಿನಿಯರು ಶನಿವಾರ ಸಾಂಪ್ರದಾಯಿಕ ಉಡುಗೆತೊಟ್ಟು ವಿವಿಧ ತಿನಿಸು, ವಸ್ತುಗಳ ಮಾರಾಟ, ಸೇವನೆಯಲ್ಲಿ ತಲ್ಲೀನರಾಗಿದ್ದರು.

» ಪಾನಿಪೂರಿ, ನಿಪ್ಪಟ್ಟು ಮಸಾಲೆ, ಕೋಸಂಬರಿ ರುಚಿ

ನಗರದ ಸರ್ಕಾರಿ ಮಹಿಳಾ ಕಾಲೇಜು ಆವರಣದಲ್ಲಿ ಸೇಲ್ಸ್ ಡೇ ಅಂಗವಾಗಿ 25 ಸ್ಟಾಲ್‌ಗಳು ತಲೆ ಎತ್ತಿದ್ದವು. ಪಾನಿಪೂರಿ, ನಿಪ್ಪಟ್ಟು ಮಸಾಲೆ, ಕೋಸಂಬರಿ, ಫ್ರೂಟ್‌ಸಲಾಡ್, ಐಸ್‌ಕ್ರೀಂ, ಗೋಲ್‌ಕುಪ್ಪ ನಿಪ್ಪಟ್ ಮಸಾಲೆ, ರವೆ ಉಂಡೆ, ಪಡ್ಡು, ಮೈಸೂರ್‌ಬೋಂಡಾ, ಬಜ್ಜಿ, ಆಲೂಗಡ್ಡೆ ಬಜ್ಜಿ ಹೆಲ್ತಿಫುಡ್ ವೆಜ್, ಫಲುಡಾ ಜೆಲ್ಲಿ, ರಸಗುಲ್ಲಾ, ಕಾಬುಲ್ ಚನ್ನಾ ಮಸಾಲ ಮಾರಟದ ಅಬ್ಬರದಲ್ಲಿ ಕಂಡು ಬಂತು. ಪಲಾವ್, ಒಬ್ಬಟ್ಟು, ಮಜ್ಜಿಗೆ ಸೇರಿದಂತೆ ಇನ್ನು ಕೆಲವು ಸ್ಟಾಲ್‌ಗಳಲ್ಲಿ ಬಿಸಿಬಿಸಿ ದೋಸೆ ಇನ್ನಿತರೆ ಕರಿದ ತಿಂಡಿಗಳು ನೆರೆದಿದ್ದವರ ಮೂಗು ಅರಳಿಸುತ್ತಿತ್ತು. ಸಹಪಾಠಿಗಳು ಏನೇನೊ ಮಾಡಿದ್ದಾರೆ ಖರೀದಿಸಿ ರುಚಿ ನೋಡೋಣ ಎಂದು ಸ್ಟಾಲ್‌ಗಳತ್ತ ಗ್ರಾಹಕರಂತೆ ಮುಗಿಬೀಳುತ್ತಿದ್ದ ಇತರೆ ವಿದ್ಯಾರ್ಥಿನಿಯರು ಹಣ ನೀಡಿ ಖರೀದಿಸಿದರು. ಉಪನ್ಯಾಸಕರು ಕೂಡ ಸ್ಟಾಲ್‌ಗಳತ್ತ ತೆರಳಿ ರುಚಿ ನೋಡಿ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದ ದೃಶ್ಯ ಕಂಡುಬಂತು. ಬೆಳಗ್ಗೆ 11ರಿಂದ ಮಧ್ಯಾಹ್ನ 4 ಗಂಟೆವರೆಗೂ ಮಾರಾಟ ನಡೆಯಿತು. ಸಾಂಪ್ರದಾಯಿಕ ಉಡುಗೆಗಳೊಂದಿಗೆ ವಿದ್ಯಾರ್ಥಿನಿಯರು ಆಗಮಿಸಿದ್ದರು.

ಪ್ರಾಂಶುಪಾಲ ಪ್ರೊ.ರಾಜೇಂದ್ರ ಚಾಲನೆ ನೀಡಿದರು. ಪ್ರಾಧ್ಯಾಪಕರಾದ ವಿಜಯಕುಮಾರ್, ಸೀನಾನಾಯಕ್, ಸೀನಪ್ಪ, ಬಿ.ವಿ.ಬೃಂದಾ, ವಿನುತಾ, ರವೀಂದ್ರ, ವಿಜಯಾ, ಮಂಜುನಾಥ್, ಡಾ.ಶಿವಪ್ಪ ಜಿ.ಅರಿವು, ಸಿ.ಎ.ರಮೇಶ್, ಯಶೋದಾ, ನಾಗರಾಜ್, ಛಾಯಾಬಾಯಿ, ಸತೀಶ್, ಕಚೇರಿ ಅಧೀಕ್ಷಕ ಗೋಪಿನಾಥ್, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಅರುಣ್ ಉಪಸ್ಥಿತರಿದ್ದರು.

ಕೋಲಾರದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ನಡೆದ ಸೇಲ್ಸ್ ಡೇ ಕಾರ್ಯಕ್ರಮಕ್ಕೆ ಪ್ರಾಂಶುಪಾಲ ಪ್ರೊ.ರಾಜೇಂದ್ರ ವ್ಯಾಪಾರ ಮಾಡುವ ಮೂಲಕ ಚಾಲನೆ ನೀಡಿದರು. ವಿಜಯಕುಮಾರ್, ಸೀನಾನಾಯಕ್, ಸೀನಪ್ಪ ಮತ್ತಿತರರಿದ್ದರು.